ದಿನಾಂಕ **12-01-2024** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

ಮುಂದುವರೆದ ಪಾಟಿ ಸವಾಲು ಃ ಶ್ರೀ ಕೆ ಬಿ ಕೆ ವಾದಿ ಪರ ವಕೀಲರಿಂದ -

ಸರ್ವೆ ನಂ.118/ಅ ಆ್ತಯ ಮೇಲೆ ಮಹಾವೀರ ಬ್ಯಾಂಕಿನವರು ಸಾಲ ಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಆ ಪ್ರಕಾರ ಸದ್ರಿ ಆಸ್ತಿಯ ಉತಾರದಲ್ಲಿ ಮಹಾವೀರ ಬ್ಯಾಂಕಿನ ಭೋಜಾ ದಾಖಲ ಆಗಿದೆ ಎಂದರೆ ನನಗ ಗೊತ್ತಿಲ್ಲ. ಸಾಕ್ಷಿಗೆ 2005-06 ರಲ್ಲಿ ಭೋಜಾ ದಾಖಲ ಆದ ಬಗ್ಗೆ ಡೈರಿ ಉತಾರ ತೋರಿಸಲಾಗಿ ಅದನ್ನು ನೋಡಿ ಒಪ್ಪಿದ್ದರಿಂದ ಅದನ್ನು ನಿ.ಪಿ-20 ಎಂದು ಗುರುತಿಸಲಾಯಿತು. ದಿನಾಂಕ 21-11-2015 ರ ಪಿಟಿ ಶೀಟ ತಪ್ಪಾಗಿದೆ ಎಂದು ರದ್ದು ಪಡಿಸಲು ಡಿ.ಡಿ.ಎಲ್.ಆರ್ ಅವರಿಗೆ ಅಪೀಲನ್ನು ನಾವು ಸಲ್ಲಿರುವುದಿಲ್ಲ . ಆ ರೀತಿ ಡಿ.ಡಿ.ಎಲ್.ಆರ್ ಅವರಿಗೆ ಅರ್ಜಿ ಸಲ್ಲಿಸಲು ಅಡಚಣೆ ಇರಲಿಲ್ಲ.

ಶಿವರುದ್ರ ಮಲ್ಲಪ್ಪ ಗಾಣಿಗೇರ , ಮಲ್ಲಪ್ಪ ಅಣ್ಣಪ್ಪ ಗಾಣಿಗೇರ , ಚಿದಾನಂದ ಮಹಾಲಿಂಗ ದರ್ಬಾರ, ದೇವರಾಜ ಮಹಾಲಿಂಗ ದರ್ಬಾರೆ, ಕಲೀಲಹಮ್ಮದ ಅಬ್ದುಲಹಮೀದ ಬಾಗವಾನ ಮತ್ತು ಇರಫಾನ ಯಾಕೂಬ ಕಂಡಾಯಿ ಇವರು ಪ್ಲಾಟ ಖರೀದಿ ಮಾಡಿರುತ್ತಾರೆ ಎಂದು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಬರೆಸಿರುತ್ತೇನೆ. ಅವರು ಖರೀದಿ ಮಾಡಿದ ಬಗ್ಗೆ ಖರೀದಿ ಪತ್ರಗಳನ್ನು ನಾನು ನೋಡಿರುವುದಿಲ್ಲ. ಸರ್ವೆ ನಂ. 118 ಅ/2 ರಲ್ಲಿ ಪ್ಲಾಟ ನಂ. 47 ರಿಂದ 61 ರ ವರೆಗೆ ಖರೀದಿ ಮಾಡಿರುತ್ತಾರೆ . ಯಾರು ಯಾರು ಯಾವ ಪ್ಲಾಟನ್ನು ಖರೀದಿ ಮಾಡಿರುತ್ತಾರೆ ಎಂದು ನನಗ ನಿಖರವಾಗಿ ಹೇಳಲು ಬರುವುದಿಲ್ಲ. ಸಿ ಟಿ ಎಸ್ ಉತಾರಗಳನ್ನು ನಾವು ಹಾಜರ ಪಡಿಸಿರುತ್ತೇವೆ.

ಮಹಾಮ್ಮದಶಫಿ ಇರುವವರೆಗೂ ದಾವಾಸ್ತಿ ಆತನ ಕಬ್ಜಾ ವೈವಾಟಿನಲ್ಲಿದ್ದು ಆತನು ತೀರಿಕೊಂಡ ನಂತರ ಆತನ ಹೆಂಡತಿ ಶರೀಫಾರವರು ಮಾಲ್ಕಿ ನಾತೆಯಿಂದ ಕಬ್ಜಾ ವೈವಾಟು ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. 2015 ರಲ್ಲಿ ವಾದಿ ಮೋಜಣಿ ಮಾಡಿಸುವ ಸಂದರ್ಭದಲ್ಲಿ ನಾನು ಮತ್ತು ಇನ್ನುಳಿದ ಪ್ರತಿವಾದಿಯರು ಅಕ್ರಮ ಮನೆ ಕಟ್ಟಿಕೂಂಡ ಬಗ್ಗೆ ಕಂಡು ಬಂದಿರುತ್ತದೆ ಎಂದರೆ ಸರಿಯಲ್ಲ. ವಾದಿಯು ನಮಗೆ ಸ್ವಂತ ಖರ್ಚಿನಲ್ಲಿ ಕಟ್ಟಡವನ್ನು ತೆರವುಗೊಳಿಸುವಂತೆ ಕೇಳಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ವಾದಿಯು ನಮಗೆ ಮನೆ ಕಟ್ಟದಂತೆ ಹೇಳಿದರೂ ಸಹ ದಂಡಗಾಯತನದಿಂದ ಮನೆ ಕಟ್ಟಿರುತ್ತೇವೆ ಎಂದರೆ ಸರಿಯಲ್ಲ. ಅದೇ ರೀತಿ ವಾದಿಯು ಪುರಸಭೆಯಲ್ಲಿ ಮನೆ ಕಟ್ಟದಂತೆ ತಕರಾರು ಕೊಟ್ಟಿದ್ದರು ಎಂದರೆ ಸರಿಯಲ್ಲ. ನಾನು ಸರ್ವೆ ಅಧಿಕಾರಿ ಇರುವುದರಿಂದ ಪುರಸಭೆಯವರನ್ನು ಅನುಕೂಲ ಮಾಡಿಕೊಂಡು ದಾವೆ ಪೆಂಡಿಂಗ ಇದ್ದಾಗ ಮನೆ ಕಟ್ಟಿರುತ್ತೇವೆ ಎಂದರೆ ಸರಿಯಲ್ಲ. ಆ ಪ್ರಕಾರ ನಾನು ದಾವಾಸ್ತಿಯ ಖೊಟ್ಟಿ ದಾಖಲಾತಿಗಳನ್ನು ತಯಾರಿಸಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರುವಿಚಾರಣೆಃ ಇಲ್ಲ.</u>**

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೆ ಕೇ ಸರಿ ಅದೇ

ಸಿ ಜೆ & ಜೆ ಎಂ ಎಫ್ ಸಿ ಹುಕ್ಕೇರಿ